**ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.**

**ಸಿ. ಸಿ. ನಂಬರಃ 495/2025**

**ಫಿರ್ಯಾದುದಾರರು** ದಿ. ಜನತಾ ಕೋ-ಅಪರೇಟಿವ್ ಕ್ರೆಡಿಟ್ ಸೊಸೈಟಿ, ಲಿಮಿಟೆಡ್,
ಕಾರ್ ಸ್ಟ್ರೀಟ್, ಸೂಸಗಡಿ ಗ್ರಾಮ, ಮುಖ್ಯ ಶಾಖೆ, ಭಟ್ಕಳ ,
ಪ್ರತಿನಿಧಿಸುವವರು, ಇದರ ಶಾಖಾ ವ್ಯವಸ್ಥಾಪಕರು/ ಅಧಿಕೃತ ಪ್ರತಿನಿಧಿ
ಶ್ರೀ ವಿನೋದ ಮಂಜುನಾಥ ನಾಯ್ಕ,

**- ವಿರುದ್ಧ -**

**ಆರೋಪಿತರು** ಶ್ರೀಮತಿ ನೂತನ ತಂದೆಃ ನಾರಾಯಣ ಶಿರೂರು,
ವಯಸ್ಸುಃ 35 ವರ್ಷ
ಸಾಃ 813/1, ಮಹಾತ್ಮ ಗಾಂಧಿ ರಸ್ತೆ, ಕಾಜುಭಾಗ್,
ಕಾರವಾರ . ಹಾಲಿ ಕೆಲಸಃ ಟೌನ್ ಮುನ್ಸಿಪಾಲಿಟಿ, ಶಿರಸಿ,
ಶಿರಸಿ ತಾಲೂಕು, ಉತ್ತರ ಕನ್ನಡ ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು ದಿನಾಂಕಃ 02-11-2022 ರಂದು ಪಿರ್ಯಾದಿ ಸಂಸ್ಥೆಯ ಮುಖ್ಯ ಶಾಖೆಯಿಂದ ರೂ.2,00,000/- (ರೂಪಾಯಿ ಎರಡು ಲಕ್ಷ ಮಾತ್ರ) ಹಣವನ್ನು Salary earners personal ಸಾಲವಾಗಿ ಸಾಲದ ಖಾತೆ ಸಂಖ್ಯೆ SPL-957 ರಲ್ಲಿ ಪಡೆದುಕೊಂಡಿದ್ದು ಇರುತ್ತದೆ. ಶೇಕಡಾ 15% ವಾರ್ಷಿಕ ಬಡ್ಡಿ ಮತ್ತು ತಪ್ಪಿದ್ದಲ್ಲಿ ಶೇಕಡಾ 2% ದಂಡದ ಬಡ್ಡಿ ದರದಲ್ಲಿ ಮರುಪಾವತಿ ಮಾಡುವುದಾಗಿ ಕೆಲವು ದಾಖಲೆಗಳನ್ನು ಬರೆದುಕೊಟ್ಟಿದ್ದು ಇರುತ್ತದೆ. ದಿನಾಂಕಃ 18-12-2024 ರವರೆಗೆ ಒಟ್ಟು ರೂ. 2,48,573/-(ಅಸಲು ರೂ. 1,95,314/-, ಬಡ್ಡಿ ರೂ. 51,577/- ಮತ್ತು ದಂಡದ ಬಡ್ಡಿ ರೂ.1,682/- ) ಬಾಕಿ ಇರುತ್ತದೆ. ಷದ್ರಿ ಸಾಲದ ಹಣವನ್ನು ಮರುಪಾವತಿ ಮಾಡುವ ಸಲುವಾಗಿ ನೀವು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿವಿಲ್ ಕೋರ್ಟ್ ರಸ್ತೆ, ಕಾರವಾರ ಶಾಖೆಯ ಚೆಕ್ ನಂಬರ್ 985124 ನ್ನು ರೂ. 2,48,000/-( ರೂಪಾಯಿ ಎರಡು ಲಕ್ಷದ ನಲವತ್ತೆಂಟು ಸಾವಿರ ಮಾತ್ರ) ಕ್ಕೆ ದಿನಾಂಕಃ 18-12-2024 ಎಂದು ನಮೂದಿಸಿ ಚೆಕ್ ನ್ನು ಫಿರ್ಯಾದಿದಾರರಿಗೆ ನೀಡಿರುತ್ತೀರಿ, ಷದ್ರಿ ಚೆಕ್ಕನ್ನು ಫಿರ್ಯಾದಿ ಸೊಸೈಟಿಯವರು ದಿ.ಭಟ್ಕಳ ಅರ್ಬನ್ ಕೋ-ಅಪರೇಟಿವ್ ಲಿಮಿಟೆಡ್, ಭಟ್ಕಳ ಬಜಾರ ಶಾಖೆಯಲ್ಲಿ ನಗದೀಕರಣಕ್ಕಾಗಿ

ಹಾಜರಪಡಿಸಿದಾಗ,“Exceeds Arrangements” ಎಂಬ ಹಿಂಬರಹದೊಂದಿಗೆ ದಿನಾಂಕಃ 20-12-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 01-01-2025 ರಂದು ತಮ್ಮ ವಕೀಲರ ಮೂಲಕ ಲೀಗಲ್ ನೋಟಿಸನ್ನು ರಿಜಿಸ್ಟರ್ ಅಂಚೆ ಮುಖಾಂತರ ನಿಮಗೆ ಕಳುಹಿಸಿದ್ದು, ಸದ್ರಿ ಚೆಕ್ಕಿನಲ್ಲಿ ನಮೂದಿಸಿರುವ ಹಣವನ್ನು ನೋಟಿಸು ತಲುಪಿದ 15 ದಿನಗಳೊಳಗೆ ಮರು ಮಾಡುವಂತೆ ತಿಳಿಸಿದ್ದು, ಸದ್ರಿ ನೋಟಿಸ್ಸು ನಿಮಗೆ ದಿನಾಂಕಃ 04-01-2025 ರಂದು ಜ್ಯಾರಿಯಾಗಿರುತ್ತದೆ. ಆದರೆ ಇಂದಿನವರೆಗೂ ನೀವು ಚೆಕ್ಕಿನ ಹಣವನ್ನು ಪಾವತಿ ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/-

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 05-07-2025. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.